# ಉಟ್ಟ ಸೀರೆಯ ಉಡಲಾರೆ

■ ಭೋಜರಾಜ ಸೊಪ್ಪಿಮಠ
ಕಲೆ: ಈಶ್ವರ ಬಡಿಗೇರ



ಅದೊಂದು ದಿನ ಟೀವಿಯಲ್ಲಿ ‘ಕುರುಕ್ಷೇತ್ರ’ ಚಲನಚಿತ್ರ ಪ್ರಸಾರವಾಗುತ್ತಿತ್ತು. ಪೌರಾಣಿಕ ಕಥೆಯಾದುದರಿಂದ ಮಕ್ಕಳಿಗೆ ಅದನ್ನು ತಿಳಿಸಿದಂತೆಯೂ ಆಗುತ್ತದೆ. ಜೊತೆಗೆ ದೃಶ್ಯ ವೈಭವದಿಂದಾಗಿ ನೋಡಲೂ ಆಸಕ್ತಿ ಇರುತ್ತದೆ ಎಂದು ಮನೆಮಂದಿಯೆಲ್ಲ ನೋಡಲು ಕುಳಿತಿದ್ದೆವು. ನಡುನಡುವೆ ಸಂದರ್ಭಕ್ಕೆ ತಕ್ಕ ವಿವರಣೆಯನ್ನು ಕೊಡುತ್ತಾ ಹೋಗುತ್ತಿದ್ದೆ. ಅದರಲ್ಲಿ ಬರುವ ಪಾತ್ರಗಳು, ಯುದ್ಧ ನೀತಿ, ಧರ್ಮದಿಂದ ನುಡಿಯುವ ನಡೆಯುವ ರೀತಿ, ಆಣೆ ಪ್ರಮಾಣ, ಕುಟಿಲತೆ, ಕುಶಲತೆ, ಶಾಪ ಮುಂತಾದವುಗಳನ್ನು ವಿವರಿಸತೊಡಗಿದ್ದೆ.

‘ಪಪ್ಪಾ, ದ್ರೌಪದಿಗೆ ಐದು ಜನ ಗಂಡಂದಿರಾ?’ ಮಗನ ಪ್ರಶ್ನೆ. ನಾನು ‘ಹೌದು’ ಎಂದೆ. ‘ಯಾವುದಾದರೂ ಸಭೆ, ಸಮಾರಂಭದಲ್ಲಿ ಗಂಡನ ಹೆಸರು ಹೇಳೆಂದರೆ ಯಾರ ಹೆಸರನ್ನು ಹೇಳುತ್ತಾಳೆ?’ ಎಂದು ಕೇಳಿದ. ಒಂದು ದಿನವಾದರೂ ನನಗೆ ಇಂತಹ ದೂರದ ಆಲೋಚನೆಯಾಗಲೀ ದುರಾಲೋಚನೆಯಾಗಲೀ ಬಂದಿರಲಿಲ್ಲ. ಮಗ ಇಷ್ಟೊಂದು ಫಾಸ್ಟಾ? ನಾನು ಸುಮ್ಮನಿದ್ದೆ. ಹೆಂಡತಿ ಕಿಸಕ್ಕನೆ ನಕ್ಕಳು. ಅವಳೇಕೆ ನಕ್ಕಳು ಗೊತ್ತಾಗಲಿಲ್ಲ.

‘ಧೃತರಾಷ್ಟ್ರನಿಗೆ ನೂರು ಜನ ಮಕ್ಕಳು ಸಾಧ್ಯವೇ?’ ಮಗಳ ಪ್ರಶ್ನೆ. ಅಂತಹ ಸಂದಿಗ್ಧಮಯ ಪ್ರಶ್ನೆಗಳಿಗೆ ಉತ್ತರಿಸುವುದು ಕಷ್ಟವಾಗತೊಡಗಿತು. ಆದರೂ ಅದನ್ನು ಸಂಭಾಳಿಸಿದೆ. ‘ಮಂತ್ರಕ್ಕೆ ಮಾವಿನಕಾಯಿ ಉದುರುತ್ತೆ ಎಂದು ಕೇಳಿದ್ದೆ. ಆದರೆ ಮಂತ್ರಕ್ಕೆ ಮಕ್ಕಳು ಕೂಡ ಆಗುತ್ತವೆ ಎಂದು ಮಹಾಭಾರತದಿಂದಲೇ ಗೊತ್ತಾದದ್ದು’ ಎಂದು ಏನೂ ತಿಳಿಯದ ಮಕ್ಕಳಂತೆ ನನ್ನ ಹೆಂಡತಿ ಕೂಡ ಒಂದು ಕಮೆಂಟ್ ಹೊರಹಾಕಿ ಟೀವಿ ಬಿಟ್ಟು ನನ್ನನ್ನು ನೋಡುತ್ತಾ ಕುಳಿತಳು. ಉತ್ತರಿಸಲು ಹೋದರೆ ಅದಕ್ಕೆ ಉಪಪ್ರಶ್ನೆ ಸೃಷ್ಟಿಯಾಗುತ್ತದೆ ಎಂದು ಸುಮ್ಮನಾಗಿ ಬಿಟ್ಟೆ.

ಯುದ್ಧದ ಸನ್ನಿವೇಶ ಬಂತು. ಪ್ರಮಾಣ–ಶಾಪಗಳ ಭರಾಟೆ ಜೋರಾಯಿತು. ಕುಂತಿಯ ಮಾತನ್ನು ಪೂರೈಸಲು ಕರ್ಣ ‘ತೊಟ್ಟ ಬಾಣವ ತೊಡಲಾರೆ’ ಎಂದು ಆಣೆ ಮಾಡುವ ಸನ್ನಿವೇಶದಿಂದ ಪ್ರೇರಣೆಗೊಂಡ ಮಕ್ಕಳು, ‘ನಾವೂ ಇಂದಿನಿಂದ ಒಂದು ಪ್ರಮಾಣ ಮಾಡೋಣ’ ಎಂದರು. ‘ಹಾಗೇ ಆಗಲಿ’ ಎಂದೆವು. ‘ಇಂದಿನಿಂದ ಒಂದು ಗಂಟೆ ಜಾಸ್ತಿ ಅಭ್ಯಾಸ ಮಾಡುತ್ತೇನೆ’ ಎಂದು ಮಗ ಭಾಷೆ ಕೊಟ್ಟ. ಭೇಷ್! ಎಂದೆವು. ‘ಇನ್ನು ಮುಂದೆ ಅಗತ್ಯವಿರುವಷ್ಟು ಖರ್ಚು ಮಾಡುತ್ತೇನೆ. ಅನಗತ್ಯ ಖರ್ಚುಗಳನ್ನು ನಿಲ್ಲಿಸುತ್ತೇನೆ’ ಎಂದು ಮಗಳು ಹೇಳಿದಳು. ಅದಕ್ಕೂ ಎಲ್ಲರ ಪ್ರಶಂಸೆ. ನಂತರದ ಸರದಿ ಹೆಂಡತಿಯದು.

ಆಕೆ ಏನೂ ಹೇಳದೆ ಸುಮ್ಮನೆ ಕುಳಿತಳು. ‘ನಿನ್ನ ಸರದಿ’ ಎಂದು ಎಚ್ಚರಿಸಿದಾಗ ‘ನನ್ನ ಪ್ರಮಾಣವನ್ನು ನೀವು ಒಪ್ಪಿಕೊಳ್ಳಬೇಕು’ ಎಂದು ನನಗೆ ಕಂಡೀಷನ್ ಹಾಕಿದಳು. ‘ಹೇಳುವುದಕ್ಕೂ ಮುಂಚೆಯೇ ಕಂಡೀಷನ್ ಅಪ್ಲೈನಾ?’ ಎಂದೆ. ‘ಹೌದು, ಹಾಗಿದ್ದರೆ ಮಾತ್ರ ಹೇಳುವುದು’ ಎಂದಳು.

ಯಾವುದೋ ಮಾತಿನ ಭರದಲ್ಲಿ ಆಗಲಿ ಎಂದು ಹೇಳಿದೆ. ‘ಮಾತಿಗೆ ತಪ್ಪುವ ಹಾಗಿಲ್ಲ’ ಎಂದು ಎಚ್ಚರಿಸಿದಳು. ಅದಕ್ಕೂ ಒಪ್ಪಿಕೊಂಡೆ. ಕೂಡಲೇ ಅವಳು, ‘ಕರ್ಣ ಹೇಳಿದ್ದು ತೊಟ್ಟ ಬಾಣವ ತೊಡಲಾರೆ ಎಂದು, ಈಗ ನಾನು ಹೇಳುತ್ತಿರುವುದು ಉಟ್ಟ ಸೀರೆಯ ಉಡಲಾರೆ. ಇದು ನನ್ನ ಹೊಸ ಪ್ರತಿಜ್ಞೆ’ ಎಂದಳು.

ಒಂದು ಕ್ಷಣ ಎಲ್ಲರೂ ಸೇರಿಕೊಂಡು ನಗತೊಡಗಿದೆವು. ನಂತರ ಅವಳು ಏನು ಹೇಳಿದಳು ಎಂದು ನೆನಪಿಸಿಕೊಂಡೆ. ನಿಧಾನವಾಗಿ ಅವಳ ಮಾತಿನ ಅರ್ಥವನ್ನು ಮಾಡಿಕೊಳ್ಳುತ್ತಲೇ ನನ್ನ ನಗುವೇ ಮಾಯವಾಯಿತು. ಗಂಟಲು ಒಣಗಿ ಹೋಯಿತು. ಜೇಬು ಖಾಲಿ ಖಾಲಿ ಎನಿಸಿತು. ಹೆಂಡತಿ ಗೆಲುವಿನ ನಗೆ ಬೀರುವುದನ್ನು ಮರೆಯಲಿಲ್ಲ. ಕೊನೆಗೂ ಅವಳು ನನ್ನನ್ನು ಖೆಡ್ಡಾದಲ್ಲಿ ಕೆಡವುದರಲ್ಲಿ ಯಶಸ್ವಿಯಾದಳು.

ಪ್ರತಿಕ್ರಿಯಿಸಿ: feedback@sudha.co.in